ಈ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಆಲೋಚನೆ ಮಾಡಿದ್ದೀರಾ ಎಂಬ ಬಗ್ಗೆ ತಮ್ಮ ಮೂಲಕ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಪ್ರೌಢಶಾಲಾ ಅಧ್ಯಾಪಕರ ಕೊರತೆ ಇರುವ ಪ್ರಶ್ನೆ ಏನಿದೆ ಇದು ರಾಜ್ಯವ್ಯಾಪ್ತಿಯಾಗಿರತಕ್ಕ ಪ್ರಶ್ನೆಯಾಗಿದೆ. ಇದು ಕೇವಲ ದಕ್ಷಿಣ ಕನ್ನಡ ಜಿಲ್ಲೆ ಅಥವಾ ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಸೀಮಿತವಾದ ಪ್ರಶ್ನೆಯಲ್ಲ ಕರ್ನಾಟಕ ರಾಜ್ಯದಲ್ಲಿ ಈ ಕೊರತೆಯನ್ನು ನೀಗಿಸಲಿಕ್ಕೆ ನಾವು ಈಗಾಗಲೇ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮೊದಲನೆಯದಾಗಿ, ಶೇಕಡ 25 ರಷ್ಟು ಖಾಲಿ ಹುದ್ದೆಗಳಿಗೆ ಏನಿವೆ ಅದನ್ನು ನೇಮಕಾತಿಯ ನಿಯಮದಂತೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ನೀಡಿ ತುಂಬಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಬಹುಶಃ 1-2 ತಿಂಗಳಲ್ಲಿ ಈ ಕಾರ್ಯಕ್ರಮ ಮುಗಿಯುತ್ತದೆ. ಅದರಲ್ಲಿ ಶೇಕಡ 25 ರಷ್ಟು ಏನು ಖಾಲಿ ಹುದ್ದೆಗಳಿವೆ ಅವನ್ನು ತುಂಬುತ್ತೇವೆ. ಎರಡನೆಯದಾಗಿ, ಉಳಿದ ಶೇಕಡ 40 ರಷ್ಟು ಹುದ್ದೆಗಳನ್ನು ಸ್ಟೈಫಂಡರಿ ಪದವೀಧರರಿಂದ ತುಂಬಲು ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ. ಈ ವಿಷಯವನ್ನು ಸಮಾಜ ಕಲ್ಯಾಣ ಇಲಾಖೆಗೆ ಈಗಾಗಲೇ ಬರೆದು ತಿಳಿಸಿದ್ದೇವೆ. ಆ ಪಟ್ಟಿ ಅವರಿಂದ ನಮಗೆ ಒಂದು ತಿಂಗಳ ಒಳಗೆ ಬರಬಹುದು, ಕ್ವಾಲಫೈಡ್ ಪೀಪಲ್ ಯಾರು, ಯಾರು ಅರ್ಹತೆ ಹೊಂದಿದ್ದಾರೆ ಎಂದು ಅವರಿಂದ ಪಟ್ಟಿ ಬಂದ ಕೂಡಲೇ ಆ ಹುದ್ದೆಗಳನ್ನು ತುಂಬುತ್ತೇವೆ. ಉಳಿದ ಹುದ್ದೆಗಳನ್ನು ನಾವು ನೇರ ನೇಮಕಾತಿಯ ಮೂಲಕ ಭರ್ತಿ ಮಾಡುತ್ತೇವೆ. ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ಯಾವ ರೀತಿ ತುಂಬಿದ್ದೇವೆ, ಅದೇ ಪ್ರಕಾರ ನೇರನೇಮಕಾತಿಯನ್ನು ಮಾಡಿಕೊಳ್ಳಲು ಈಗಾಗಲೇ ನಿಯಮಗಳನ್ನು ರೂಪಿಸಿ ಕಾನೂನು ಇಲಾಖೆಗೆ ಕಳುಹಿಸಿದ್ದೇವೆ. ಅದನ್ನು ಇನ್ನೊಂದು ವಾರದೊಳಗೆ ಕ್ಯಾಬಿನೆಟ್‌ಗೆ ತಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈ ದೃಷ್ಟಿಯಿಂದ 5-6 ತಿಂಗಳೊಳಗೆ ಈ ಎಲ್ಲಾ ಖಾಲಿ ಇರುವ ಹುದ್ದೆಗಳನ್ನು ತುಂಬಲಿಕ್ಕೆ ಸಾಧ್ಯವಾಗುತ್ತದೆ ಎಂಬ ನಂಬಿಕೆ ನನಗೆ ಇದೆ.

ವಿಟ್ಲ-ಮೂಡಬಿದ್ರೆಯ ವಿದ್ಯುತ್ ಸಬ್‌ಸ್ಟೇಷನ್ ಕೆಲಸವನ್ನು ಪೂರ್ಣಗೊಳಿಸುವುದು.

2221 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮತ್ತು ಮೂಡಬಿದ್ರೆ ವಿದ್ಯುತ್ ಸಬ್-ಸ್ಟೇಷನ್ನಿನ ಕೆಲಸ ಮಂದಗತಿಯಿಂದ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?*

ಆ) *ಇದರಿಂದ ವಿಟ್ಲ ಮತ್ತು ಮೂಡಬಿದ್ರೆಯ ಪತ್ತಿರವಿರುವ ಜನರಿಗೆ ಆಗುತ್ತಿರುವ ವಿದ್ಯುತ್ ಅಡಚಣೆಯನ್ನು ಸರಿಪಡಿಸಲು ವಿಳಂಬವಾಗುವುದಿಲ್ಲವೇ?*

ಇ) *ಇದರ ಕೆಲಸವನ್ನು ತ್ವರಿತವಾಗಿ ಮಾಡಲು ಕ್ರಮ ತೆಗೆದುಕೊಂಡು ಇದನ್ನು ಎಂದು ಸಂಪೂರ್ಣಗೊಳಿಸಲಾಗುವುದು?*

ಶ್ರೀ ಎಂ.ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮತ್ತು ಮೂಡಬಿದ್ರೆಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ನಿರ್ವಹಿಸುತ್ತಿರುವ ಉಪ ವಿದ್ಯುತ್ ಕೇಂದ್ರಗಳ ನಿರ್ಮಾಣ ಕಾರ್ಯವು ಸ್ವಲ್ಪ ಮಂದಗತಿಯಿಂದ ಸಾಗುತ್ತಿರುವುದಕ್ಕೆ ಮುಖ್ಯ ಕಾರಣ ಮುಂಗಾರಿನ ತಿಂಗಳುಗಳಲ್ಲಿ ತಲೆದೋರಿರುವ ಪ್ರತಿಕೂಲ ಹವಾಮಾನ ಪರಿಸ್ಥಿತಿ. ಆದಾಗ್ಯೂ ನಿರ್ಮಾಣ ಕಾರ್ಯವನ್ನು ಚುರುಕುಗೊಳಿಸಲಾಗುತ್ತಿದೆ.

ಆ) ಆದಷ್ಟು ಜಾಗ್ರತೆ, ಸದರೀ ಉಪ ವಿದ್ಯುತ್ ಕೇಂದ್ರಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಮಂಡಳಿಯು ಶ್ರಮಿಸುತ್ತದೆ.

ಇ) ಮುಂಬರುವ ತಿಂಗಳುಗಳಲ್ಲಿ ಬಾಕಿ ಉಳಿದಿರುವ ನಿರ್ಮಾಣದ ಕಾರ್ಯಗಳನ್ನು ತ್ವರಿತಗೊಳಿಸಿ ಮಾರ್ಚಿ 1992 ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮತ್ತು ಮೂಡಬಿದ್ರೆ ಆಸುಪಾಸಿನ ವಿದ್ಯುತ್ ಬಳಕೆದಾರರಿಗೆ ವಿದ್ಯುತ್ ಕಡಿತದಿಂದಾಗಿ ಬಹಳ ತೊಂದರೆಯಾಗುತ್ತಿದೆ. ದಿನಕ್ಕೆ ಆರು ಗಂಟೆಗಳ ಕಾಲ ವಿದ್ಯುತ್ ಕಟ್ ಮಾಡುತ್ತೇವೆಂದರೂ, ಯಾವ ಸಮಯದಲ್ಲಿ ಕರೆಂಟ್ ಹೋಗುತ್ತದೆ, ಯಾವಾಗ ಮತ್ತೆ ಬರುತ್ತದೆ ಎಂದು ಹೇಳುವುದು ಕಷ್ಟವಾಗಿದೆ. ಮತ್ತು ರೈತರ ಪಂಪುಸೆಟ್‌ಗಳು ರನ್ ಆಗುತ್ತಿಲ್ಲ, ಹಗಲೂ ಕರೆಂಟ್ ಇರುವುದಿಲ್ಲ, ರಾತ್ರಿಯೂ ಕರೆಂಟ್ ಇರುವುದಿಲ್ಲ. ಈ ದೃಷ್ಟಿಯಿಂದ ವಿಟ್ಲ ಮತ್ತು ಮೂಡಬಿದ್ರೆ ವಿದ್ಯುತ್ ಸಬ್‌ಸ್ಟೇಷನ್ ಕೆಲಸವನ್ನು ಚುರುಕುಗೊಳಿಸಬೇಕೆಂದು ಕೇಳುತ್ತೇನೆ. ಈ ಹಿಂದೆ ಇದನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾಗ, ಈ ವರ್ಷದ ಜೂನ್ ತಿಂಗಳೊಳಗೆ ಈ ಕೆಲಸವನ್ನು ಪೂರ್ಣ ಮಾಡಿಕೊಡುತ್ತೇವೆಂದು ಸಚಿವರು ಭರವಸೆಯನ್ನು ಕೊಟ್ಟಿದ್ದರು. ಆದರೆ ಇದುವರೆಗೂ ಕೆಲಸ ಪೂರ್ಣವಾಗಿಲ್ಲ. ಈಗ ಸರ್ಕಾರದವರು ತಮ್ಮ ಉತ್ತರದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮತ್ತು ಮೂಡಬಿದ್ರೆಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ನಿರ್ವಹಿಸುತ್ತಿರುವ ಉಪ ವಿದ್ಯುತ್ ಕೇಂದ್ರಗಳ ನಿರ್ಮಾಣ ಕಾರ್ಯ ಸ್ವಲ್ಪ ಮಂದಗತಿಯಿಂದ ಸಾಗುತ್ತಿರುವುದಕ್ಕೆ ಮುಖ್ಯ ಕಾರಣ ಮುಂಗಾರಿನ ತಿಂಗಳುಗಳಲ್ಲಿ ತಲೆದೋರಿರುವ ಪ್ರತಿಕೂಲ ಹವಾಮಾನ ಪರಿಸ್ಥಿತಿ. ಆದಾಗ್ಯೂ ನಿರ್ಮಾಣ ಕಾರ್ಯವನ್ನು ಚುರುಕುಗೊಳಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ನಿಜವಾಗಿ ಮುಂಗಾರು ಪ್ರಾರಂಭವಾಗುವುದು ಜೂನ್ ತಿಂಗಳ ನಂತರ. ಕಳೆದ ಅಧಿವೇಶನದಲ್ಲಿ ನಮಗೆ ಜೂನ್ ತಿಂಗಳೊಳಗೆ ಈ ಕೆಲಸವನ್ನು ಪೂರ್ಣ ಮಾಡಿ ಕೊಡುತ್ತೇವೆಂದು ಉತ್ತರ ಕೊಟ್ಟಿದ್ದರು. ಸತ್ಯಕ್ಕೆ ದೂರವಾದಂಥ ಉತ್ತರವನ್ನು ಸರ್ಕಾರದವರು ಕೊಟ್ಟಿದ್ದಾರೆ ಇದನ್ನು ಸರಿಮಾಡಬೇಕು. ಮೂರನೆ ಪ್ರಶ್ನೆಗೆ ಉತ್ತರವಾಗಿ ಮುಂಬರುವ ತಿಂಗಳುಗಳಲ್ಲಿ ಬಾಕಿ ಉಳಿದಿರುವ ನಿರ್ಮಾಣ ಕಾರ್ಯಗಳನ್ನು ತ್ವರಿತಗೊಳಿಸಿ ಮಾರ್ಚಿ 1992ರ ಅಂತ್ಯದ ವೇಳೆಗೆ ಈ ಕೆಲಸವನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ ಎಂದೂ ಸಹ ಉತ್ತರವನ್ನು ಕೊಟ್ಟಿದ್ದಾರೆ. ನಿಶ್ಚಿತವಾಗಿ ಈ ಕೆಲಸವನ್ನು ಯಾವಾಗ ಮುಗಿಸಿಕೊಡುತ್ತಾರೆಂದು ತಿಳಿಸಬೇಕೆಂದು ನಾನು ಸನ್ಮಾನ್ಯ ಮಂತ್ರಿಯವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ : ಈ ವರ್ಷ ನಾವು ಈ ಕೆಲಸವನ್ನು ತೆಗೆದುಕೊಂಡಿದ್ದು, ಮಾರ್ಚಿ 1992ರೊಳಗೆ ಮುಗಿಸಿಕೊಡುತ್ತೇವೆಂದು ಹೇಳಿದ್ದೇವೆ, ಮುಗಿಸಿ ಕೊಡುತ್ತೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ತಮ್ಮ ಹೇಳಿಕೆಯನ್ನು ಕಾರ್ಯರೂಪಕ್ಕೆ ತಂದರೆ ಸಾಕು.

ಶ್ರೀ ಎಂ. ರಾಮಪ್ಪ : ಕೆಲಸ ಈ ವರ್ಷ ಪ್ರಾರಂಭವಾಗಿದೆ. ಮಳೆಯಿಂದ ಸ್ವಲ್ಪ ನಿಧಾನವಾಗಿದೆ. ಮಾರ್ಚಿ 1992 ರೊಳಗೆ ಮುಗಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಮೂಡಬಿದ್ರೆ ಸಬ್‌ಸ್ಟೇಷನ್ ವಿಚಾರದಲ್ಲೂ ಸಹ ಶ್ರೀ ಪೂಜಾರಿಯವರ ಪ್ರಶ್ನೆಯಲ್ಲಿ ಅಳವಡಿಸಿದ್ದಾರೆ. ನಮ್ಮ 2 ಉಪಕೇಂದ್ರಗಳು ಒಟ್ಟಿಗೆ ಪ್ರಾರಂಭಿಸಲ್ಪಟ್ಟಿದೆ. ನನಗೆ ತಿಳಿದ ಮಟ್ಟಿಗೆ, ಮೂಡಬಿದ್ರೆಯದು ಫೌಂಡೇಷನ್ ಮುಗಿದು ಸ್ಟ್ರಕ್ಚರ್ ಲೆವೆಲ್‌ವರೆಗೂ ಬಂದಿದೆ. ಏನೋ ಇಂಜಿನಿಯರ್ಸ್ ಒಳಗೆ ಭಿನ್ನಾಭಿಪ್ರಾಯ ಉಂಟಾಗಿ ಕೆಲಸ ಸ್ಥಗಿತಗೊಂಡಿದೆಯೆಂದು ತಿಳಿದು ಬಂದಿದೆ. ಆದುದರಿಂದ